# ಯಾಕಾಶಿ ಮಣೇವು



**ಗೋವಿಂದರಾಜು ಎಂ. ಕಲ್ಲೂರು**

ಕಲೆ: ವೆಂಕಟ್ರಮಣ ಭಟ್

ಅಂದು ಸಂಪಿಗೆಪುರದ ಮಾದಿರ ಹಟ್ಟೆಲ್ಲಾ ಸಡಗ್ರದಾಗೆ ವಾಲಾಡ್ತಾ ಇತ್ತು. ಕಳೆದ ವರ್ಷ ಏಕಾದಶಿನಾಗೆ ಊರೊಳ್ಳೋರೆಲ್ಲಾ ಸರ್ಕಂಡು ಕರಿಯಣ್ಣ-ಕೆಂಚಣ್ಣನ ಜೊತೆಗೆ ಕರಿಸ್ವಾಮ-ಕೆಂಪುಸ್ವಾಮವನ್ನು ಕುಣಿಸ್ಕಂಡು ಬೀದಿ-ಬೀದಿಯ ಮೇಲೆ ಮಡಿ ಸೀರೆ ಹಾಸಿ ರಂಗಾ... ರಂಗಾ... ಅಂದುಕೊಂಡು ಮಣೇವಕ್ಕಂಡು ಹೋಗೋದನ್ನ ಆರಡಿ ದೂರದಿಂದಲೇ ನೋಡ್ತಿದ್ದ ಮಾದಿರಟ್ಟಿಯ ಅಳ್ಳಾಡೋ ತಲೆ, ತೂಗಾಡೋ ಯುವಕರೆಲ್ಲಾ ಒಂದ್ಕಡೆ ಸರ್ಕಂಡ್ರು 'ನಾವ್ರೂ ಇಂತದೊಂದು ಏಕಾಶಿ ಮಣೇವು ಮಾಡ್ಲೇಬೇಕು ಕಣ್ರಲೇ' ಎಂದು ಪಿಸಿಪಿಸಿನೆ ಆಡಿಕೊಂಡ್ವು.

'ಹಟ್ಟಿ ಮುಂಭಾಗದಾಗೆ ಮನೆಗೊಂದು ಆಳು ಬಂದು ಸೇರಬೇಕು' ಅಂತ ಹತ್ತಿರದ ಮನುಸ ಸರ್ಕಂಡು ಬರೋಕೋದ ಮ್ಯಾಲೆ ಮಾದಿಗರ ಹಟ್ಟಿ ನಡುಗ ತಲೆಗಳೆಲ್ಲಾ ಸಾಲಾಗೀ ಕೂತ್ಕಂಡು ಹೈಕ್ಳು ಬರೋದನ್ನೇ ಕಾಯ್ತಿದ್ದೋ. ಅಂಗೆ-ಇಂಗೆ, ಆಟೊತ್ತು-ಈಟ್ಟೊತ್ತು ಆಗಿ ಜನ ಸರ್ಕಂಡ್ ಮೇಲೆ ಲೈನುಕ್ ಕುಂತಿದ್ದ ನಡುಗ ತಲೆಗುಳಲ್ಲೆಲ್ಲಾ ಜೋರಾಗಿ ನಡ್ಗುತ್ತಿದ್ದ ತಲೆಯೊಂದು ತನ್ನ ಬೊಜ್ಜ ಬಾಯನ್ನು ತೆರೀತು. 'ನಮ್ ತಾತ-ಮುತ್ತಾತನ ಕಾಲದಿಂದ್ಲೂ ಏಕಾಶಿ ಹಬ್ಬದಾಗ ಊರೊಳ್ಳೋರು ಮಾಡೋ ಮಣೇವು ಸೇವೆನಾ ಆರಡಿ ದೂರದಿಂದ ನೋಡ್ತಾನೇ ಬಂದೀವಿ. ಆ ಪರಮಾತುಮ ತಿಂದು ಬಿಟ್ಟ ಒಂದೇ ಒಂದಿಡಿ ಪರಸಾದ ಇಲ್ಲಿತಂಕ ನಮ್ಗೆ ಬೇಡಿರೂ ಸಿಕ್ಕಿಲ್ಲ. ಅವನ ನಾಮದ ಒಕ್ಕಲಾಗಿ ಹುಟ್ಟಿ ಊರಾಗೆ ಬದುಕಿರೋ ನಾವುಗಳೆಲ್ಲಾ ಸರ್ಕಂಡು ಒಂದು ಚಪ್ಪರವಾದರೂ ಹಾಕಿ ಎರಡು ಅರಿಗೇ ತಿದ್ದಿಸಿ ನಾಮದಯ್ಯನಿಗೆ ನೆಳ್ಳು-ನೆಲೆ ಮಾಡುಮಾ ಏನಂತೀರಪ್ಪಾ' ಅಂತು.

ಕಳೆದ್ವರ್ಷ ಊರೊಳ್ಳೋರ ಏಕಾಶಿ ಮಾಣೇವು ಸೇವೆಯಲ್ಲಿ ಕರಿಯಣ್ಣ ಸ್ವಾಮಿ ಬಾಯಿಂದ ನೆಲುಕ್ಕೆ ಉದುರಿದ ಒಂದೇ ಒಂದು ಸೀಳು ಹಲಸಿನ ಹಣ್ಣಿನ ಸಿಬರನ್ನೇ ಮಾ... ಮಹಾಪ್ರಸಾದ ಅಂತ ಹಟ್ಟೆರೆಲ್ಲಾ ಈಟೀಟೇ ಜುಂಗುಟಿಕೊಂಡು ಕಣ್ಣಿಗೊತ್ತಿಕೊಂಡು ತಿಂದಿದ್ದರು. ಕೆಲವರು ಆ ಪ್ರಸಾದವ ತಿನ್ನಕೆ ಅಲ್ಲದಿದ್ರೂ ಅದನ್ನು ಮುಟ್ಟಾಕರಾ ಕೊಡಿರಪ್ಪೋ ಅಂತೇಳಿ ಆ ಸಿಬಿರನ್ನ ಮುಟ್ಟಿ ಆ ಕೈನ ಅಂಗೇ ತಕ್ಕಂಡೋಗಿ ತಮ್ಮ ಮಕ್ಕಳ ಕಣ್ಣಿಗೆ ಒತಿ 'ನೀನೇ ಕಾಯ್ದು ಕಾಪಾಡಬೇಕು ನಮ್ಮಪ್ನೆ' ಅಂತ ಮ್ಯಾಕೆ ಕೈ ಮುಗಿದಿದ್ದರು. ಇಂಥಾ ಘಟನೆಗುಳೆಲ್ಲಾ ಸಭೆಯಲ್ಲಿದ್ದ ಜನರ ತಲೆತುಂಬ ವಾಲಾಡಿ ಅಂತೇಳಿ 'ಹೌದು ನಾವ್ರೂ ಒಂದು ಗುಡಿಯ ಕಟ್ಟೇ ತರ್ಬೇಕು ನಮ್ಗೆ ಸ್ವಾಮಿ ಎಂಕುಟೇಶನ ಆಶೀರ್ವಾದ ಬೇಕೇ ಬೇಕು' ಅಂತು ಆ ಸಭೆಯಲ್ಲಿದ್ದ ಜನ.

ಈ ಹರಿಜನಗೋಳು ತಮ್ಮ ದೇವುಸ್ಥಾನದ ಪ್ರಸ್ತಾಪವ ಊರಾಗೇ ದೊಡ್ಡಕುಳವಾದ ಭದ್ರಾಚಾರರ ಬಳಿ ತಕ್ಕಂಡೋದಾಗ ದೈತ್ಯದೇಹಿಯಾದ ಭದ್ರಾಚರ್ರು ಕೈ ಕಟ್ಟಿ ನಡೂಬಗ್ಗಿಸಿ ನಿಂತಿದ್ದ ಆ ಜನುವ ದುರುಗುಟ್ಟಿ ನೋಡಿ 'ಹೋಗ್ರುಲಾ ನಿಮ್ಮ ಕೇರಿ ಮಗ್ಗುಲದಾಗಿನ ಐದು ಕುಂಟೆ ಜಾಗುವ ನಿಮಗೇ ಬಿಟ್ಟೆ' ಅಂದ್ರು. ಈ ಮಾತಾ ಕೇಳಿ ಮಾದಿಗರ ಮಾಸಿದ ತಲೆಗಳೆಲ್ಲಾ